ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಶುಕ್ರವಾರ, ದಿನಾಂಕ: 11ನೇ ಡಿಸೆಂಬರ್, 2020

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ ಹಾಗೂ ಸೇವೆಗೆ ಸಂಬಂಧಿಸಿದ ಕುರಿತು

ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

506(379) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಸರ್ಕಾರ ತಯಾರು ಮಾಡಿದಿಯೇ; ಮಾಡಿದ್ದಲ್ಲಿ ಪಟ್ಟಿಯನ್ನು ಒದಗಿಸುವುದು ;

(ಆ) ಪಿ.ಡಿ.ಓ.ಗಳ ನೇಮಕಾತಿಗೆ ಸಂಬಂಧಪಟ್ಟಂತೆ, ತಾತ್ಕಾಲಿಕ ಆಯ್ಕೆ ಪಟ್ಟಿ ಹಾಗೂ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸದಿರಲು ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಹಾಗೂ ಹೈಕೋರ್ಟ್ ತಡೆಯಾಜ್ಞೆ ನೀಡಿದೆಯೇ; ನೀಡಿದ್ದಲ್ಲಿ, ಆದೇಶದ ಪ್ರತಿಗಳನ್ನು ನೀಡುವುದು ;

(ಇ) ಪಿ.ಡಿ.ಓ.ಗಳ (ನೇರ ನೇಮಕಾತಿ) ಅಂತಿಮ ಆಯ್ಕೆ ಪಟ್ಟಿಯನ್ನು ಒಂದೇ ದಿನಾಂಕದಂದು ಪ್ರಕಟಿಸುವ ಬಗ್ಗೆ ಸರ್ಕಾರ ತೀರ್ಮಾನಿಸಿದೆಯೇ; ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಒಂದೇ ದಿನಾಂಕದಂದು ಪಿ.ಡಿ.ಓ.ಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವಂತೆ ನೀಡಿದ ಆದೇಶದ ಪ್ರತಿಯನ್ನು ನೀಡುವುದು;

(ಈ) ದಿನಾಂಕ:01.01.2010 ರಿಂದ 31.12.2013 ರವರೆಗೆ ಪಿ.ಡಿ.ಓ.ಗಳ ಜಿಲ್ಲಾವಾರು ಜೇಷ್ಠತಾ ಪಟ್ಟಿಯನ್ನು ನೀಡುವುದು;

(ಉ) ರದ್ದಾದ ಹಿಂದಿನ ವಿಸ್ತರಣಾಧಿಕಾರಿಗಳ ಸೇವಾ ಅವಧಿಯನ್ನು ಪರಿಗಣಿಸಿ ಪಿ.ಡಿ.ಓ.ಗಳ ಜೇಷ್ಠತಾ ಪಟ್ಟಿಯಲ್ಲಿ ಮೇಲಿನ ಸ್ಥಾನ ನೀಡಲು ಅವಕಾಶ ಕಲ್ಪಿಸುವ ನೇಮಕಾತಿ ನಿಯಮ, ಸರ್ಕಾರಿ ಆದೇಶ ಅಥವಾ ಕಾಯ್ದೆ ಹಾಗೂ ನ್ಯಾಯಲಯದ ಆದೇಶದ ಪ್ರತಿ ನೀಡುವುದು ;

(ಊ) ಪಿ.ಡಿ.ಓ., ಸಹಾಯಕ ನಿರ್ದೇಶಕರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳ ಜೇಷ್ಠತಾ ಪಟ್ಟಿ ಮತ್ತು ಪದೋನ್ನತಿಗೆ ಸಂಬಂಧಪಟ್ಟಂತೆ ಯಾವುದಾದರೂ ನ್ಯಾಯಾಲಯಗಳಲ್ಲಿ ಪ್ರಕರಣಗಳು ಇದೆಯೇ; ಇದ್ದಲ್ಲಿ, ಎಷ್ಟು ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿ ಹಾಗೂ ಮುಕ್ತಾಯಗೊಂಡಿದೆ; (ದಾಖಲೆಗಳ ಸಹಿತ ಮತ್ತು ಪ್ರಕರಣಗಳ ಸಂಖ್ಯೆ ಮತ್ತು ಪ್ರತಿಗಳ ಸಹಿತ ವಿವರವಾದ ಮಾಹಿತಿ ನೀಡುವುದು)

(ಋ) ಪಂಚಾಯತ್ ವಿಸ್ತರಣಾಧಿಕಾರಿಗಳ ಹುದ್ದೆಯನ್ನು ರದ್ದುಪಡಿಸಲು /ವಿಲೀನಗೊಳಿಸಲು ಕಾರಣವೇನು; (ಆದೇಶದ ಪ್ರತಿ ನೀಡುವುದು)

(ಎ) ಎಷ್ಟು ಹುದ್ದೆಗಳನ್ನು ರದ್ದುಪಡಿಸಲಾಗಿದೆ/ವಿಲೀನಗೊಳಿಸಲಾಗಿದೆ? (ಪಟ್ಟಿಯನ್ನು ನೀಡುವುದು)